ಸಾವಿತ್ರಿ ಅವರ ತಂದೆ ತಾಯಿ, ರಾಧೆಯ ಮನೆಗೆ ಹೋಗಿ ಅವಳ ತಂದೆ ತಾಯಿಯನ್ನು ಭೇಟಿ ಮಾಡಿ ಮಂಗಳಾರತಿ ಎತ್ತಿಸಿಕೊಂಡು ಬಂದಿದ್ದರು. ರಾಧಾಳ ಅಜ್ಜಿ ತಾತ ಈ ಮದುವೆಗೆ ಏಕ್‌ದಂ ವಿರೋಧ ತೋರಿದರಂತೆ. ಅವಳ ತಂದೆ ತಾಯಿ ಸ್ವಲ್ಪ ಮಗಳ ಪರ ಇದ್ದರೂ ಅಜ್ಜಿ ಸುತರಾಂ ಒಪ್ಪಿಕೊಳ್ಳುತ್ತಿಲ್ಲವಂತೆ.

ಒಂದು ದಿನ ನಾವೆಲ್ಲರೂ ಮಲ್ಲೇಶ್ವರಂನ ಮನೆಯಲ್ಲಿದ್ದಾಗ ತೇಜಸ್, ರಾಧಳನ್ನು ಅಲ್ಲಿಗೆ ಕರೆದುಕೊಂಡು ಬಂದ. ಎಲ್ಲರೂ ಕುಳಿತುಕೊಂಡು ರಾಧ ಮತ್ತು ತೇಜಸ್ ಮದುವೆ ಸಮಸ್ಯೆಗೆ ಪರಿಹಾರ ಏನು ಎಂಬುದರ ಬಗ್ಗೆ ಅನೇಕ ರೀತಿಯಾಗಿ ಚರ್ಚೆ ಮಾಡಿದೆವು. ನನ್ನ ಮಾವ ರಾಧಳನ್ನು `ನೋಡಮ್ಮ, ನಾವು ಬೇಕಾದರೆ ಎಲ್ಲರೂ ಇನ್ನೊಂದು ಸಲ ನಿಮ್ಮ ಮನೆಗೆ ಬಂದು ಮದುವೆ ಬಗ್ಗೆ ವಿಚಾರಿಸ್ತೀವಿ' ಎಂದಾಗ ರಾಧ `ಇಲ್ಲ ಅಂಕಲ್ ನಮ್ಮ ಮನೆಯಲ್ಲಿ ಒಪ್ಪಿಕೊಳ್ಳುವುದಿಲ್ಲ. ನಾನು ಎಲ್ಲಾ ರೀತಿಯಲ್ಲೂ ಪ್ರಯತ್ನ ಮಾಡಿ ಆಗಿದೆ' ಎಂದಳು. `ಹೋಗ್ಲಿ ನೀನು ಒಪ್ಪಿದರೆ ನಾವೆಲ್ಲ ಪೊಲೀಸ್ ಠಾಣೆಗೋಗಿ ಅಲ್ಲೇ ಮದುವೆ ಮಾಡಿಸುತ್ತೇವೆ. ಇಲ್ಲ ತಿರುಪತಿಯೋ ಧರ್ಮಸ್ಥಳದಲ್ಲೋ ಮದುವೆ ಮಾಡಿಕೊಂಡು ಬಂದು ಬಿಡೋಣ' ಎಂದರು ಮಾವ. ರಾಧ ಒಪ್ಪಿಕೊಳ್ಳಲಿಲ್ಲ. ಅಲ್ಲಿಗೆ ನಮ್ಮ ಪ್ರಯತ್ನಗಳೆಲ್ಲ ಮುಗಿದು ಹೋಗಿದ್ದವು. ಈ ನಡುವೆ ಎಂಜಿನಿಯರಿಂಗ್ ಪರೀಕ್ಷೆಗಳ ಫಲಿತಾಂಶ ಬಂದು ದಮಯಂತಿ ಮತ್ತು ತೇಜಸ್ ಇಬ್ಬರೂ ಪಾಸಾಗಿದ್ದರು.

***

## ಸಂಕಷ್ಟದಲ್ಲಿ ದಮಯಂತಿ

ಒಂದು ದಿನ ದಮಯಂತಿ ಸಾಯಂಕಾಲ ದ್ವಿಚಕ್ರವಾಹನ ತೆಗೆದುಕೊಂಡು ಹೋದ ದಮಯಂತಿ ರಾತ್ರಿ ಹತ್ತು ಗಂಟೆಯಾದರೂ ಹಿಂದಿರುಗಲೇ ಇಲ್ಲ. ಸಾವಿತ್ರಿ, `ರೀ ಅವಳು ಇನ್ನೂ ಬಂದಿಲ್ಲ ನೋಡ್ರಿ' ಎಂದು ಅಂಗಲಾಚುತ್ತಿದ್ದಳು. ದಮಯಂತಿಯ ಮೊಬೈಲ್‌ಗೆ ಎಷ್ಟು ಸಲ ಫೋನ್ ಮಾಡಿದರೂ ತೆಗೆಯಲಿಲ್ಲ. ತೇಜಸ್ ಅವನಿಗೆ ಗೊತ್ತಿದ್ದ ದಮಯಂತಿಯ ಗೆಳತಿಯರಿಗೆಲ್ಲ ಫೋನ್ ಮಾಡಿ ಮಾಡಿ ಕೇಳುತ್ತಿದ್ದ. ಆದರೆ ಎಲ್ಲ ಕಡೆಯೂ ನಮಗೆ ಗೊತ್ತಿಲ್ಲ, ಗೊತ್ತಿಲ್ಲ ಎಂಬ ಉತ್ತರವೇ ಬರುತ್ತಿತ್ತು. ಹನ್ನೊಂದು ಗಂಟೆಯಾದರೂ ಅವಳ ಸುಳಿವಿಲ್ಲ. ಕೊನೆಗೆ ನಾನು ತೇಜಸ್ ಇಬ್ಬರೂ ಕಾರು ತೆಗೆದುಕೊಂಡು ಸಾವಿತ್ರಿಯನ್ನು ಮನೆ ಒಳಗಡೆ ಬೋಲ್ಟ್ ಹಾಕಿಕೊಂಡು ಇರುವಂತೆ ಹೇಳಿ ಹೊರಟೆವು. ಅಷ್ಟರಲ್ಲಿ ಸಾವಿತ್ರಿಯ ತಂದೆ ತಾಯಿ ಇಬ್ಬರು ಬಾಗಿಲಿಗೆ ಬಂದು ನಿಂತುಕೊಂಡರು. ಅವರನ್ನು ಮನೆಯಲ್ಲೇ ಬಿಟ್ಟು ನಾನು ತೇಜಸ್ ವಿಜಯನಗರ ಪೊಲೀಸ್ ಠಾಣೆಗೆ ಹೋಗಿ ವಿಷಯ ತಿಳಿಸಿದೆವು.

ನನ್ನ ಎದುರಿಗೆ ಪೊಲೀಸರು ಅಕ್ಕಪಕ್ಕದ ಒಂದೊಂದೇ ಪೊಲೀಸ್ ಠಾಣೆಗೆ ಫೋನ್ ಮಾಡಿ ವಿಚಾರಿಸಿದರು. ರಾತ್ರಿ ಹನ್ನೆರಡು ಗಂಟೆಗೆ ಪೊಲೀಸ್ ಠಾಣೆಗೆ ಎಲ್ಲಿಂದಲೋ ಒಂದು ದೂರವಾಣಿ ಕರೆ ಬಂದು ಪೊಲೀಸರ ಕಿವಿಗಳು ನೆಟ್ಟಗಾದವು. ವಿವರಗಳನ್ನು ಕೇಳಿಕೊಂಡು ದಮಯಂತಿಯ ವಾಹನದ ಸಂಖ್ಯೆಯನ್ನು ಕೇಳಿದರು. ತೇಜಸ್ ವಾಹನದ ಸಂಖ್ಯೆ ಹೇಳಿದ. ಠಾಣೆಯ ಸಬ್ ಇನ್ಸ್‌ಪೆಕ್ಟರ್ ಮತ್ತೊಮ್ಮೆ ವಾಹನದ ಸಂಖ್ಯೆಯನ್ನು ದೃಢೀಕರಿಸಿಕೊಂಡು 'ಸರ್, ನಡೆಯಿರಿ ನೀವು ಹೇಳಿದ ಸಂಖ್ಯೆ ಸರಿಯಾಗಿದೆ. ನಿಮ್ಮ ಮಗಳೆ ಅನಿಸುತ್ತೆ. ಆಸ್ಪತ್ರೆಯಲ್ಲಿ ದ್ದಾರಂತೆ ನಡೆಯಿರಿ' ಎಂದರು. `ಸರ್. ನನ್ನ ಮಗಳಿಗೆ ಏನಾಗಿದೆ ಸರ್?' ಎಂದು ಅಂಗಲಾಚುತ್ತ ಕೇಳಿದೆ. ನನ್ನ ಮೈಯೆಲ್ಲ ನನಗೆ ಗೊತ್ತಿಲ್ಲದೆಯೇ ಕಂಪಿಸುತ್ತಿತ್ತು.

ಜೀಪು ಆಸ್ಪತ್ರೆ ಮುಂದೆ ನಿಂತುಕೊಂಡಿದ್ದೆ ಸಬ್ ಇನ್ಸ್‌ಪೆಕ್ಟರ್ ಹಿಂದೆಯೇ ಓಡಿದೆವು. ಒಂದು ಕೋಣೆಯ ಒಳಗೆ ಹೋಗಿದ್ದೇ ಒಂದು ಹಾಸಿಗೆ ಮೇಲೆ ದಮಯಂತಿಯನ್ನು ಮಲಗಿಸಲಾಗಿತ್ತು. ಅವಳು ತೊಟ್ಟಿದ್ದ ಬಟ್ಟೆಯೆಲ್ಲ ಹರಿದು ಹೋಗಿದೆ. ತುಟಿಗಳ ಮೇಲೆ ರಕ್ತ ಹೆಪ್ಪು ಕಟ್ಟಿದೆ. ದಮಯಂತಿಯ ಹತ್ತಿರಕ್ಕೆ ಹೋಗಿ ಧೈರ್ಯ ಮಾಡಿಕೊಂಡು ನಿಧಾನವಾಗಿ ಅವಳ ತಲೆ ಸವರಿದೆ. ಕಣ್ಣು ತೆರೆದ ದಮಯಂತಿ `ಡ್ಯಾಡಿ' ಎಂದಳು. ನನ್ನಿಂದ ತಡೆದುಕೊಳ್ಳಲು ಆಗಲಿಲ್ಲ. `ಅಮ್ಮ...ದಮಯಂತಿ...' ಎನ್ನುತ್ತ ಜೋರಾಗಿ ಅತ್ತುಬಿಟ್ಟೆ. ಮುಖ್ಯ ವೈದ್ಯರು ಮತ್ತು ಸಬ್ ಇನ್ಸ್‌ಪೆಕ್ಟರ್ ಇಬ್ಬರೂ ಏನೋ ಮಾತನಾಡಿಕೊಂಡ ಮೇಲೆ `ಸರ್. ನಿಮ್ಮ ಮಗಳು ಮಾತಾಡ್ತಾ ಇದ್ದಾರೆ. ಏನೂ ತೊಂದರೆ ಇಲ್ಲ. ನಾವು ಅವರಿಂದ ಒಂದು ಹೇಳಿಕೆ ಪಡೆಯಬೇಕಾಗಿದೆ. ನೀವು ಸ್ವಲ್ಪ ಹೊರಗಡೆ ಇದ್ದರೆ ಒಳ್ಳೇದು' ಎಂದರು. ನಾನು, ತೇಜಸ್ ಇಬ್ಬರೂ ಹೊರಗಡೆಗೆ ಬಂದು ನಿಂತುಕೊಂಡೆವು.




**ಹೆಣ್ಣು**

ಹೆಣ್ಣನ್ನು ಸೃಷ್ಟಿಸಿದ ಮೇಲೆ
ಆ ಭಗವಂತನಿಗೂ ಆಗಿರಬೇಕು
ಗೊಂದಲ
ಅದಕ್ಕೇ ಹೆಣ್ಣಿಗಾಗಿ ಇಷ್ಟೆಲ್ಲಾ
ತಳಮಳ–ಕೋಲಾಹಲ !

**–ಆರ್.ಸುನೀಲ್ ತರೀಕೆರೆ**

ಹೊರಗೆ ಬಂದ ಸಬ್ ಇನ್ಸ್‌ಪೆಕ್ಟರ್ ಅವರನ್ನು `ಏನಾಗಿದೆ ಸರ್' ಎಂದೆ. ಹತ್ತಿರಕ್ಕೆ ಬಂದು ಮೃದುವಾಗಿ **Mostly rape attempt** ಆಗಿರ್ಬೇಕು ಅನಿಸುತ್ತೆ ಸರ್' ಎಂದರು. ಆ ಮಾತು ಕೇಳಿ ಆಕಾಶವೇ ತಲೆ ಮೇಲೆ ಬಿದ್ದಂತೆ ಕುಸಿದುಬಿಟ್ಟೆ. ತೇಜಸ್ ಮುಖ ಬಿಳಿಚಿಕೊಂಡಿದ್ದು ಕಣ್ಣುಗಳ ತುಂಬಾ ಕಣ್ಣೀರು ತುಂಬಿಕೊಂಡಿದ್ದರೂ ಕಣ್ಣುಗಳಲ್ಲಿ ಪ್ರಾಣ ಹಿಡಿದುಕೊಂಡವನಂತೆ, 'ಡ್ಯಾಡ್ ಮಮ್ಮಿ ಫೋನ್ ಮಾಡ್ತಾನೆ ಇದ್ದಾರೆ. ನಾವು ಒಂದು ಸಲ ಫೋನ್ ಮಾಡಿ ತಿಳಿಸಿದರೆ ಚೆನ್ನಾಗಿರುತ್ತೆ' ಎಂದ. `ಏನೂ ಅಂತ ಫೋನ್ ಮಾಡುವುದು?' ಎಂದೆ. 'ಸದ್ಯಕ್ಕೆ ಆಕ್ಸಿಡೆಂಟ್ ಆಗಿದೆ ಅಂತ, ಹೇಳೋಣ' ಎಂದ. 'ಹಾಗೆಂದರೆ ತಕ್ಷಣ ಎಲ್ಲರೂ ಓಡಿ ಬರ್ತಾರೆ' ಎಂದೆ. 'ಇಲ್ಲ ನಾನು ಮನೆಗೋಗಿ ಹೇಳಲಾ' ಎಂದ. ಕೆಲವು ಕ್ಷಣಗಳು ಯೋಚನೆ ಮಾಡಿ. `ಆಯಿತು. ನಾನೇ ಫೋನ್ ಮಾಡ್ತೀನಿ' ಎಂದು ನನ್ನ ಮೊಬೈಲ್ ಫೋನ್ ತೆಗೆದುಕೊಂಡು ಸಾವಿತ್ರಿಗೆ ವಿಷಯ ತಿಳಿಸಿ `ಪ್ರಾಣಕ್ಕೆ ಏನೂ ಆಗಿಲ್ಲ. ನೀವು ಬರಬೇಡಿ. ನಾವೇ ದಮಯಂತಿಯನ್ನು ಮನೆಗೆ ಕರೆದುಕೊಂಡು ಬಂದುಬಿಡ್ತೀವಿ' ಎಂದೆ. ಅರ್ಧ ಗಂಟೆಯಲ್ಲಿ ಸಾವಿತ್ರಿ ಅವಳ ತಂದೆ ತಾಯಿ ಎಲ್ಲರೂ ಆಸ್ಪತ್ರೆಗೆ ಬಂದೇ ಬಿಟ್ಟಿದ್ದರು.

ಸಾವಿತ್ರಿ, 'ನನ್ನ ಮಗಳಿಗೆ ಏನೊ ಆಗಿದೆ. ನೀವು ಮುಚ್ಚಿಡ್ತಿದ್ದೀರಿ' ಎಂದು ಅಳುತ್ತಿದ್ದಳು. ಬೆಳಗಿನ ಜಾವ ಎರಡು ಗಂಟೆಗೆ ವೈದ್ಯರು ಮತ್ತು ಪೊಲೀಸರು ದಮಯಂತಿಯ ಕೋಣೆಯಿಂದ ಹೊರಗೆ ಬಂದಿದ್ದೇ ಸಾವಿತ್ರಿ ಕೋಣೆ ಒಳಕ್ಕೆ ನುಗ್ಗಿದಳು. ಅವಳ ಹಿಂದೆ ಶಾರದಾ ಮ್ಯಾಡಮ್ ಕೂಡ ಹೋದರು. ಗಟ್ಟಿಯಾದ, ಧೈರ್ಯವಂತಳಾದ ದಮಯಂತಿ ಎದ್ದು ಕುಳಿತುಕೊಂಡಿದ್ದಳು. ಆದರೆ ಬಟ್ಟೆಗಳೆಲ್ಲ ಹರಿದು ಹೋಗಿರುವುದನ್ನು ನೋಡಿದ ಸಾವಿತ್ರಿಗೆ ಅನುಮಾನ ಬರದೇ ಇರಲಿಲ್ಲ. ಸಬ್ ಇನ್ಸ್‌ಪೆಕ್ಟರ್ ನನ್ನನ್ನ ವೈದ್ಯರ ಕೋಣೆಗೆ ಕರೆದುಕೊಂಡು ಹೋದರು. ನನ್ನ ಮಾವನನ್ನು ಕೋಣೆಯ ಒಳಕ್ಕೆ ಕರೆದು ಪರಿಚಯ ಮಾಡಿಸಿದೆ. `ಸರ್. ನೀವಿಬ್ಬರೂ ಪ್ರೊಫೆಸರ್‌ಗಳು. ನಿಮಗೆ ಏನಂತ ಹೇಳುವುದು ಗೊತ್ತಾಗ್ತಾ ಇಲ್ಲ' ಎಂದು ಪ್ರಾರಂಭಿಸಿದ ಸಬ್ ಇನ್ಸ್‌ಪೆಕ್ಟರ್ `ನಿಮ್ಮ ಮಗಳ ಹೇಳಿಕೆಯಂತೆ, ಮನೆಗೆ ವಾಪಸ್ ಬರ್ತಾ ಇದ್ದಾಗ ಸ್ಕೂಟರ್ ರಸ್ತೆಯಲ್ಲಿ ನಿಂತೋಯಿತಂತೆ. ಅದನ್ನ ಕಿಕ್ ಮಾಡ್ತಾ ಇದ್ದಾಗ ಒಂದು ದ್ವಿಚಕ್ರ ಗಾಡಿಯಲ್ಲಿ ಮೂವರು ಯುವಕರು ಬಂದಿದ್ದಾರೆ. ನಿಮ್ಮ ಮಗಳೆ ಅವರನ್ನು ನಿಲ್ಲಿಸಿ ಗಾಡಿ ನಿಂತೋಗಿದೆ ಸ್ವಲ್ಪ ನೋಡಿ ಎಂದಳಂತೆ. ಅವರು ಮೂವರೂ ಕುಡಿದಿರುವುದು ನಿಮ್ಮ ಮಗಳಿಗೆ